# ಅಸ್ಪೃಶ್ಯತೆಯ ನಿರ್ಮೂಲನೆಯಲ್ಲಿ ಸಾಂವಿಧಾನಿಕ ನಿಬಂಧನೆಗಳ ಪಾತ್ರ

ನಾಗರಾಜ ಹರಿಜನ

ಉಪನ್ಯಾಸಕರು, ಶ್ರೀಮದ್ ರಂಭಾಪುರಿ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ.

DOI: https://doi.org/10.5281/zenodo.15504316

## ABSTRACT:

ಭಾರತವು ಒಂದು ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿ ಜನಿಸಿದ ಪ್ರತಿಯೊಬ್ಬ ಪ್ರಜೆಯೂ ಸಂವಿಧಾನದ ಅಡಿಯಲ್ಲಿ ಸಮಾನತೆ ಮತ್ತು ಸಮಾನ ಅವಕಾಶಗಳನ್ನು ಪಡೆದು ಸಮಾಜದಲ್ಲಿ ಘನತೆಯಿಂದ ಜೀವಿಸಲು ಅವಕಾಶವಿದೆ. ಭಾರತದಲ್ಲಿ ಸಾವಿರಾರು ಜಾತಿಗಳ ಸಂಕೀರ್ಣತೆಯಿದ್ದರೂ ಸಹ ಎಲ್ಲರೂ ಸಮಾನರು ಎಂಬ ಸಮಾನತೆಯ ಆಶಯವನ್ನು ಇಲ್ಲಿನ ಸಂವಿಧಾನ ಎತ್ತಿಹಿಡಿದಿದೆ.

ವಿಶ್ವದ ಅತ್ಯಂತ ದೊಡ್ಡ ಸಂವಿಧಾನ ನಮ್ಮದಾಗಿದ್ದು ಇದರ ಹೆಮ್ಮೆಯ ಸಂಗತಿಯೆಂದರೆ ಅದುವೇ ಸಮಾನತೆ ಎಂದು ಹೇಳಬಹುದು. ಭಾರತದ ಸರ್ಕಾರವು ಸಂವಿಧಾನ ಜಾರಿಯಾದಾಗಿನಿಂದ ಹಿಡಿದು ಪ್ರಸ್ತುತ ದಿನಮಾನದವರೆಗೆ ಇಲ್ಲಿನ ಪ್ರತಿಯೊಬ್ಬ ಪ್ರಜೆಯೂ ಭ್ರಾತೃತ್ವ ಭಾವನೆಯೊಂದಿಗೆ ಯಾವುದೇ ಜಾತಿ, ವರ್ಗ ಮತ್ತು ಮತಗಳ ಬೇಧಭಾವವಿಲ್ಲದೇ 'ನಾವೆಲ್ಲರೂ ಭಾರತೀಯರು, ನಾವೆಲ್ಲರೂ ಸಮಾನರು' ಎನ್ನುವಂತೆ ಕಾಯ್ದೆ ಕಾನೂನುಗಳನ್ನು ಮತ್ತು ಆಡಳಿತಾತ್ಮಕ ಸುಧಾರಣೆಗಳನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಭಾರತ ಸರ್ಕಾರವು ಮೊದಲ ಬಾರಿಗೆ ಅಸ್ಪೃಶ್ಯತೆಯನ್ನು ತಡೆಯಲು 1955ರಲ್ಲಿ ಅಸ್ಪೃಶ್ಯತಾ ನಿವಾರಣಾ ಕಾಯ್ದೆಯನ್ನು ಜಾರಿಗೊಳಿಸಿತು. ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತೆಯ ಆಚರಣೆಯನ್ನು ನಿಷೇಧಿಸಿದ್ದು ಇದನ್ನು ಆಚರಿಸುವವರಿಗೆ ಕಠಿಣ ಶಿಕ್ಷೆಯನ್ನು ನೀಡುತ್ತಾ ಬಂದಿದೆ.

ಆದರೂ ಸಹ ಈ ರೀತಿಯ ಸಮಾನತೆಯ ಅಂಶಗಳ ನಡುವೆ ಭಾರತೀಯ ಸಮಾಜದಲ್ಲಿ ಅಸ್ಪೃಶ್ಯತೆ ಎಂಬ ಪಿಡುಗು ಹಿಂದಿನಿಂದ ಇಂದಿನವರೆಗೂ ನಡೆದು ಬಂದಿದ್ದು ಅದರ ನಿರ್ಮೂಲನೆಗೆ ಸಾಂವಿಧಾನಿಕ ನಿಬಂಧನೆಗಳು ಮತ್ತು ಕಾನೂನಾತ್ಮಕ ನಿಯಮಗಳಿದ್ದರೂ ಸಹ ಅಸ್ಪೃಶ್ಯತೆ ಸಂಪೂರ್ಣವಾಗಿ ನಿರ್ಮೂಲನೆಗೊಂಡಿದೆಯೇ ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತಿಕೊಂಡಾಗ ಅದಕ್ಕೆ ಬರುವ ಉತ್ತರ ಇದು ಇನ್ನೂ ಸಂಪೂರ್ಣವಾಗಿ ನಿರ್ಮೂಲನೆಗೊಂಡಿಲ್ಲ ಎಂಬುದಕ್ಕೆ ಹಲವಾರು ನಿದರ್ಶನಗಳು ಕಂಡುಬರುತ್ತವೆ. ಆದ್ದರಿಂದ ಈ ಸಮಸ್ಯೆಯ ಪರಿಹಾರದಲ್ಲಿ ಸಾಂವಿಧಾನಿಕ ನಿಬಂಧನೆಗಳ ಪಾತ್ರ ಏನೆಂಬುದನ್ನು ಕಂಡುಕೊಳ್ಳುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

## KEYWORDS:

ಅಸ್ಪೃಶ್ಯತೆ, ನಿಬಂಧನೆಗಳು, ಸಂಕೀರ್ಣತೆ, ಸಂವಿಧಾನ, ಜಾತಿ, ಅಸಮಾನತೆ.

**ಪೀಠಿಕೆ:**

ಅಸ್ಪೃಶ್ಯತೆ ಎಂಬುದು ನಮ್ಮ ದೇಶಕ್ಕೆ ಅಂಟಿದ ಒಂದು ಕಳಂಕ. ಶತಶತಮಾನಗಳಿಂದ ಈ ಆಚರಣೆಯಿಂದ ಸಹಸ್ರಾರು ಜನರು ದಾಸ್ಯಕ್ಕೆ ಒಳಗಾಗಿರುವರು. ಅಸ್ಪೃಶ್ಯತೆಯ ಆಚರಣೆಯಿಂದ ಜನರು ತಮ್ಮ ಗೌರವಯುತ ಬದುಕನ್ನು ಕಳೆದುಕೊಂಡಿದ್ದಾರೆ. ಇದನ್ನು ತೊಡೆದುಹಾಕಲು ಭಾರತದಲ್ಲಿ ಅನೇಕ ಮಹನೀಯರು ಪ್ರಯತ್ನಪಟ್ಟರೂ ನಿರೀಕ್ಷಿತ ಫಲ ದೊರೆಯದಾಗಿದೆ. ಮಹಾತ್ಮ ಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್, ಜ್ಯೋತಿರಾವ್ ಫುಲೆ, ಬಾಬುಜಗಜೀವನರಾಮ್ ಮುಂತಾದವರು ಸಾರಿ ಹೇಳಿದರೂ ಸಹ ಸಮಾಜದಲ್ಲಿ ಅಸ್ಪೃಶ್ಯತೆಯ ಆಚರಣೆಯು ಸೊಗಸಾಗಿ ಬೆಳೆಯುತ್ತಲೇ ಇದೆ. ಇದನ್ನು ತಡೆಯುವಲ್ಲಿ ಸಾಂವಿಧಾನಿಕ ನಿಬಂಧನೆಗಳನ್ನು ಜಾರಿ ಮಾಡಿದರೂ ಸಹ ಭಾರತೀಯ ಸಮಾಜದಲ್ಲಿ ಅಸ್ಪೃಶ್ಯತೆಯ ಬೇರುಗಳು ಸವರ್ಣೀಯರ ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿವೆ. ಅದನ್ನು ತಡೆಯುವುದೇ ಅಸಾಧ್ಯವಾದ ಕಾರ್ಯವಾಗಿದೆ. ಇನ್ನು ಈ ಆಚರಣೆಗೆ ಒಳಗಾಗುವವರ ಜೀವನ ಯಾತಕ್ಕೂ ಬೇಡ. ಪ್ರಾಣಿಗಳಿಗಾದರೂ ಸ್ವತಂತ್ರವಾಗಿ ಬದುಕುವ ಹಕ್ಕಿದೆ ಆದರೆ ಅಸ್ಪೃಶ್ಯತೆಗೆ ಒಳಗಾದವರಿಗೆ ಈ ಹಕ್ಕೂ ಸಹ ಇಲ್ಲದಂತಾಗಿದೆ.

ಸಮಾಜಶಾಸ್ತ್ರಜ್ಞರಾದ ಆರ್. ಡಿ. ಲಿಯಾಂಗ್ ಅವರ ಮಾತಿನಂತೆ "ಇತರರ ಅನುಭವವನ್ನು ನೀವು ಅರ್ಥಮಾಡಿಕೊಳ್ಳಲು ಸಾಧ್ಯವಿದೆ, ಆದರೆ ಆ ಅನುಭವವನ್ನು ನೀವು ಅನುಭವಿಸಲು ಸಾಧ್ಯವಿಲ್ಲ" ಎಂಬಂತೆ ಈ ಅಸ್ಪೃಶ್ಯತೆಯನ್ನು ಅರ್ಥೈಸಿಕೊಳ್ಳುವುದು ಮತ್ತು ಅನುಭವಿಸುವುದು ಯಾರಿಂದಲೂ ಸಾಧ್ಯವಿಲ್ಲದೇ ಇದಕ್ಕೆ ಒಳಗಾಗುವವರು ಇಂದಿಗೂ ಈ ಮಹಾಕೂಪದಲ್ಲೇ ಬೇಯುತ್ತಿದ್ದಾರೆ.

**ಅಸ್ಪೃಶ್ಯರು ಎಂದರೆ ಯಾರು?**

ನಮ್ಮ ದೇಶದ ಜನತೆಗೆ ಅಸ್ಪೃಶ್ಯರು ಯಾರು ಎಂದು ಹೊಸದಾಗಿ ಪರಿಚಯಿಸಬೇಕಿಲ್ಲ. ಹಿಂದೂ ಸಮಾಜದ ವ್ಯವಸ್ಥೆಯಲ್ಲಿ ಜಾತಿ ಪದ್ಧತಿಯ ಅಡಿಯಲ್ಲಿ ದೌರ್ಜನ್ಯಕ್ಕೊಳಗಾದವರು ಮತ್ತು ಅವರ ಮೇಲೆ ನಿರಂತರವಾಗಿ ಕ್ರೂರ ದಬ್ಬಾಳಿಕೆಯನ್ನು ಮಾಡಿದವರು ಹಿಂದೂ ಧರ್ಮದವರೇ ಹೊರತು ಬೇರೆಯವರಲ್ಲ ಎಂಬುದನ್ನು ಮರೆಯುವಂತಿಲ್ಲ. ಅಸ್ಪೃಶ್ಯರು ಎಂದರೆ ಮುಟ್ಟಿಸಿಕೊಳ್ಳಲು ಅನರ್ಹರು, ಮೇಲ್ವರ್ಗದ ಜನರ ಸೇವೆಗೆಂದೇ ಹುಟ್ಟಿದವರು, ಊರಿನಿಂದ ಹೊರಗೆ ವಾಸಿಸುವವರು, ಇದಲ್ಲದೇ ಸವರ್ಣೀಯ ಹಿಂದೂಗಳು ಅಸ್ಪೃಶ್ಯರು ಹೇಗೆ ಬದುಕಬೇಕೆಂಬುದರ ಬಗ್ಗೆ ವಿಧಿಸಿದ್ದ ಕಟ್ಟಳೆಗಳೆಂದರೆ

- ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದ ಒಂದು ಮಗುವು ಅಸ್ಪೃಶ್ಯನಾಗಿಯೇ ಜೀವಿಸಿ ಅಸ್ಪೃಶ್ಯನಾಗಿಯೇ ಜೀವನ ಸಾಗಿಸಿ ಕೊನೆಗೆ ಅಸ್ಪೃಶ್ಯನಾಗಿಯೇ ಸಾಯಬೇಕಿತ್ತು.

- ಅಸ್ಪೃಶ್ಯರು ಹಿಂದೂ ಸವರ್ಣೀಯರು ವಾಸಿಸುವ ಗ್ರಾಮಗಳ ಮಧ್ಯೆ ಸಂಚರಿಸುವಂತಿರಲಿಲ್ಲ.
- ಅಸ್ಪೃಶ್ಯರು ವಿದ್ಯೆ ಕಲಿಯುವ ಹಾಗಿರಲಿಲ್ಲ ಮತ್ತು ಯಾವುದೇ ಅಧಿಕಾರ, ಅಂತಸ್ತುಗಳನ್ನು ಹೊಂದುವಂತಿರಲಿಲ್ಲ.
- ಅಸ್ಪೃಶ್ಯರು ಪಾದರಕ್ಷೆ ತೊಡುವಂತಿರಲಿಲ್ಲ. ಆದರೆ ಮೇಲ್ವರ್ಗದವರು ಪಾದರಕ್ಷೆಗಳನ್ನು ತೊಡಬಹುದಾಗಿತ್ತು.
- ಅಸ್ಪೃಶ್ಯರು ಶುಭ್ರವಾದ, ಅಂಧವಾದ ಅಥವಾ ಹೊಸ ಬಟ್ಟೆಗಳನ್ನು ತೊಡುವಂತಿರಲಿಲ್ಲ ಬದಲಿಗೆ ಹರಿದು ಹೋಗಿರುವ ಮತ್ತು ಕೊಳೆಯಾದ ಚಿಂದಿ ಬಟ್ಟೆಗಳನ್ನು ತೊಡಬೇಕಾಗಿತ್ತು (ಎನ್. ಆರ್. ಶಿವರಾಂ, ಭಾರತಭಾಗ್ಯ ವಿಧಾತ ಡಾ. ಬಾಬಾಸಾಹೇಬ್ ಅಂಬೇಡ್ಕರ್, ಪುಟ 126–132).

ಈ ರೀತಿಯ ಹೀನ ಕಟ್ಟುಪಾಡುಗಳಿಗೆ ಅನುಗುಣವಾಗಿ ಜೀವಿಸುವವರನ್ನು ನಾವು ಅಸ್ಪೃಶ್ಯರು ಎಂದು ಹೇಳಬಹುದಾಗಿದೆ. ಮೇಲೆ ತಿಳಿಸಿದಂತಹ ಅಂಶಗಳು ಇಂದು ಕೂಡ ಮುಂದುವರೆದಿದ್ದು ಬದಲಾಗುವ ಸನ್ನಿವೇಶ ಕಂಡುಬರುತ್ತಿಲ್ಲ ಮತ್ತು ಈ ಬದಲಾವಣೆಯನ್ನು ಭಾರತೀಯ ಸಮಾಜದಲ್ಲಿ ಕಾಣಲು ಸಾಧ್ಯವೇ? ಎಂಬುದನ್ನು ನಮ್ಮನ್ನು ನಾವೇ ಪ್ರಶ್ನಿಸಿಕೊಂಡರೆ ಖಂಡಿತವಾಗಿ ಉತ್ತರ ದೊರೆಯುವುದು.

ಇಲ್ಲಿ ಒಂದು ಪ್ರಮುಖವಾದ ಅಂಶವನ್ನು ನೆನಪಿಟ್ಟುಕೊಳ್ಳುವುದು ಪ್ರಾಮುಖ್ಯತೆಯನ್ನು ಪಡೆದಿದೆ. ಅದುವೇ ಬಾಬಾಸಾಹೇಬ್ ಅಂಬೇಡ್ಕರ್ ಎನ್ನುವ ಮಹಾಶಯರು ಹುಟ್ಟದೇ ಇದ್ದಿದ್ದರೆ ಅಸ್ಪೃಶ್ಯರ ಬದುಕು ಪಶುಗಳಗಿಂತ ಕೀಳಾಗಿರುತ್ತಿತ್ತು ಎಂಬುದನ್ನು ಮರೆಯುವಂತಿಲ್ಲ ಮತ್ತು ಅಲ್ಲಗಳೆಯುವಂತಿಲ್ಲ.

**ಅಸ್ಪೃಶ್ಯತೆಯ ಕರಾಳತೆ:**

ಅಸ್ಪೃಶ್ಯತೆಯು ವೇದಗಳ ಕಾಲದಲ್ಲಿ ಹುಟ್ಟಿಕೊಳ್ಳದೇ ಇದ್ದರೂ ನಂತರದ ದಿನಗಳಲ್ಲಿ ಮನುವಿನ ಧರ್ಮಶಾಸ್ತ್ರದಲ್ಲಿ ಉಲ್ಲೇಖವಾದ ವರ್ಣ ಪದ್ಧತಿಯು ಮುಂದೆ ಅಸ್ಪೃಶ್ಯತೆಯ ಆಚರಣೆಗೆ ಅಡಿಗಲ್ಲಾಯಿತು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಏಕೆಂದರೆ ಪ್ರಾರಂಭದಲ್ಲಿ ಕೇವಲ ಜನರು ಮಾಡುವ ಕೆಲಸಗಳಿಗೆ ಸೀಮಿತವಾದ ವರ್ಣ ಪದ್ಧತಿ ಮುಂದೆ ಅಸ್ಪೃಶ್ಯತೆಯ ಆಚರಣೆಗೆ ದಾರಿಯಾಯಿತು. ಉದಾಹರಣೆಗೆ: ಬ್ರಾಹ್ಮಣರು ಸಮಾಜದ ಉನ್ನತ ಸ್ಥಾನದಲ್ಲಿದ್ದು ಕಲಿಯುವವರು ಮತ್ತು ಕಲಿಸುವವರಾಗಿದ್ದರು, ಕ್ಷತ್ರಿಯರು ಹೋರಾಡುವವರು, ವೈಶ್ಯರು ವ್ಯಾಪಾರಿಗಳು ಹೀಗೆ ಈ ಮೂರೂ ವರ್ಗಗಳ ಸೇವೆ ಶೂದ್ರರ ಪಾಲಿಗೆ. ಇದಕ್ಕಿಂತ ಕೆಳಹಂತದಲ್ಲಿ ಅಸ್ಪೃಶ್ಯರಿದ್ದು ಇವರನ್ನು ಅಂತ್ಯಜ ಎಂದು ಕರೆಯುತ್ತಿದ್ದರು. ಅಂತ್ಯಜ ಎಂದರೆ ಕೊನೆಗೆ

ಹುಟ್ಟಿದವರು ಎಂಬರ್ಥವಿದೆ.

ಅಸ್ಪೃಶ್ಯರು ಹಿಂದಿನ ಕಾಲದಿಂದ ಇಂದಿನವರೆಗೂ ಮೇಲ್ವರ್ಗದವರ ಹೀನ ಕಟ್ಟುಪಾಡುಗಳಂತೆ ಜೀವನ ನಡೆಸುವುದು ಅನಿವಾರ್ಯ ಮತ್ತು ಸತ್ಯವಾಗಿದೆ. ಏಕೆಂದರೆ ಸವರ್ಣೀಯರ ಪ್ರಕಾರ ಅಸ್ಪೃಶ್ಯರು ಹುಟ್ಟಿನಿಂದಲೇ ಕೀಳು ಜಾತಿಗೆ ಸೇರಿದವರು, ಇವರನ್ನು ಮುಟ್ಟಿಸಿಕೊಳ್ಳಬಾರದು, ಇವರು ಸಮಾಜದೊಂದಿಗೆ ಬದುಕಲು ಯೋಗ್ಯತೆ ಇಲ್ಲದವರು, ಊರಿನಿಂದ ಆಚೆ ಕೊಳಚೆ ಪ್ರದೇಶದಲ್ಲಿ ಜೀವಿಸಬೇಕು, ಇವರ ನೆರಳು ನಮ್ಮ ಮೇಲೆ ಬೀಳಕೂಡದು, ಇವರ ಧ್ವನಿಯನ್ನು ಕೇಳುವುದು ಅಮಂಗಳಕರ ಮತ್ತು ಯಾವುದೇ ಸಾರ್ವಜನಿಕ ದೇವಾಲಯಗಳಿಗೆ ಇವರಿಗೆ ಪ್ರವೇಶವಿಲ್ಲ, ಕ್ಷೌರದ ಅಂಗಡಿಗಳಿಗೆ ಪ್ರವೇಶವಿಲ್ಲ, ಸಾರ್ವಜನಿಕ ಕೆರೆಯ ನೀರನ್ನು ಇವರು ಉಪಯೋಗಿಸುವಂತಿಲ್ಲ ಎಂಬಂತೆ ಆಗಿನ ಕಾಲದಲ್ಲಿ ಅಸ್ಪೃಶ್ಯರು ಪಶುಗಳಂತೆ ಜೀವನ ಸಾಗಿಸಬೇಕಿತ್ತು. ಆದರೆ ಭಾರತಕ್ಕೆ ಸಂವಿಧಾನ ಜಾರಿಯಾಗಿ 76ನೇ ವರ್ಷಕ್ಕೆ ಕಾಲಿಟ್ಟರೂ ಸಹ ಈ ಹೀನ ಆಚರಣೆಗಳಲ್ಲಿ ಕೊಂಚ ಬದಲಾಗಿದೆಯೇ ಹೊರತು ಅಸ್ಪೃಶ್ಯತೆ ಮೊದಲಿನಂತೆ ಇಂದಿಗೂ ಸಹ ಅಸ್ತಿತ್ವದಲ್ಲಿರುವುದನ್ನು ಕಾಣಬಹುದಾಗಿದೆ. ಉದಾ:

- ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಮಿಯಾಪುರ ಎಂಬ ಗ್ರಾಮದಲ್ಲಿ ದಲಿತ ಸಮುದಾಯದ ಮಗು ದೇವಸ್ಥಾನಕ್ಕೆ ಪ್ರವೇಶ ಮಾಡಿದ್ದಕ್ಕೆ ಮಗುವಿನ ಪಾಲಕರಿಗೆ 25,000. –ದಂಡ ಹಾಕಿದ ಪ್ರಕರಣ (ಉದಯವಾಣಿ ದಿನಪತ್ರಿಕೆ, 26ನೇ ಸೆಪ್ಟೆಂಬರ್ 2021).
- ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನ ವಿನಾಯಕನಗರ ಕ್ಯಾಂಪಿನ ಕುಟುಂಬಸ್ಥರು 17ನೇ ಸೆಪ್ಟೆಂಬರ್ 2016ರಂದು ಗಡಿ ಚೌಡೇಶ್ವರಿ ದೇವಾಲಯಕ್ಕೆ ತೆರಳಿದ್ದ ಸಂದರ್ಭದಲ್ಲಿ ಇವರ ಜಾತಿಯನ್ನು ವಿಚಾರಿಸಿ ಇವರಿಗೆ ದೇವಾಲಯದ ಪ್ರವೇಶಕ್ಕೆ ಅಡ್ಡಿಪಡಿಸಲಾಗಿತ್ತು. ಈ ಪ್ರಕರಣವನ್ನು ಕೈಗೆತ್ತಿಕೊಂಡ ಕರ್ನಾಟಕ ಉಚ್ಛನ್ಯಾಯಾಲಯ ದೇವಾಲಯ ಏಕತೆ ಮತ್ತು ಎಲ್ಲರೂ ಒಳಗೊಳ್ಳುವಿಕೆಯ ಸಂಕೇತ. ಅಸ್ಪೃಶ್ಯತೆಯ ಆಚರಣೆ ಸಂವಿಧಾನ ಬಾಹಿರ ಎಂದು ತಿಳಿಸಿದ್ದು ದೇವಾಲಯ ಪ್ರವೇಶವನ್ನು ನಿರಾಕರಿಸುವುದು ಇಂದಿಗೂ ಮುಂದುವರಿದಿರುವುದು ದುರದೃಷ್ಟಕರ ಎಂದು ನ್ಯಾಯಾಲಯವು ಬೇಸರವನ್ನು ವ್ಯಕ್ತಪಡಿಸಿತ್ತು (ಕನ್ನಡಪ್ರಭ, 24ನೇ ನವೆಂಬರ್ 2023).
- ಇನ್ನು ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಮರುಕುಂಬಿ ಗ್ರಾಮದಲ್ಲಿ 2014ರಲ್ಲಿ ಹೋಟೆಲ್ ಹಾಗೂ ಕ್ಷೌರದಂಗಡಿ ವಿಚಾರದಲ್ಲಿ ನಡೆದ ಗಲಾಟೆಯಿಂದಾಗಿ ಮೇಲ್ವರ್ಗದವರು ದಲಿತರ ಗುಡಿಸಲುಗಳಿಗೆ ಬೆಂಕಿಯಿಟ್ಟು ಹಲ್ಲೆ ಮಾಡಿರುವ

ಘಟನೆ ಇಡೀ ರಾಜ್ಯವನ್ನೇ ಬೆಚ್ಚಿಬೀಳಿಸಿತ್ತು. ಈ ಪ್ರಕರಣವನ್ನು ಇತ್ತೀಚೆಗೆ ಕೊಪ್ಪಳ ಜಿಲ್ಲಾ ನ್ಯಾಯಾಲಯವು ವಿಚಾರಣೆ ನಡೆಸಿ 101 ಜನರಿಗೆ ಶಿಕ್ಷೆಯನ್ನು ಪ್ರಕಟಿಸಿದ್ದು ಅವರಲ್ಲಿ 98 ಜನರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದ್ದು ಇಡೀ ದೇಶದಾದ್ಯಂತ ಸಂಚಲನವನ್ನು ಸೃಷ್ಟಿಸಿತ್ತು (ಪ್ರಜಾವಾಣಿ ದಿನಪತ್ರಿಕೆ, 15ನೇ ನವೆಂಬರ್ 2024).

ನ್ಯಾಯಾಲಯವು ಈ ರೀತಿಯ ಕಠಿಣ ಶಿಕ್ಷೆಯನ್ನು ಘೋಷಿಸಿದರೂ ಸಹ ಇದರ ಕರಾಳ ಆಚರಣೆಯು ಇಂದಿಗೂ ನಿಂತಿಲ್ಲ. ಇದರ ಸರಣಿ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಮರುಕುಂಬಿಯ ಪ್ರಕರಣ ಅಸ್ಪೃಶ್ಯತೆಯ ಆಚರಣೆಯನ್ನು ಆಚರಿಸುವ ಜನರಿಗೆ ಒಂದು ಕಠಿಣ ಪಾಠವಾಗುತ್ತದೆ ಎಂದು ಭಾವಿಸಿದರೆ ಅದು ನಮ್ಮದೇ ತಪ್ಪು ಎಂಬಂತೆ ಈ ತೀರ್ಪನ್ನು ನೀಡಿದ ಕೆಲವೇ ದಿನಗಳಲ್ಲಿ ಇಂತಹದ್ದೇ ಮತ್ತೊಂದು ಪ್ರಕರಣ ವಿಜಯಪುರದಲ್ಲಿ ನಡೆದಿತ್ತು. ಮುಂದುವರೆದು ಮಂಡ್ಯ ತಾಲ್ಲೂಕಿನ ಹನಕೆರೆ ಗಾಮದಲ್ಲಿ ವಿರೋಧದ ನಡುವೆಯೂ ದಲಿತರು ದೇಗುಲ ಪ್ರವೇಶ ಮಾಡಿದ ಹಿನ್ನೆಲೆಯಲ್ಲಿ ಗ್ರಾಮದ ಸವರ್ಣೀಯರು ಉತ್ಸವ ಮೂರ್ತಿಯನ್ನೇ ಬೇರೆ ದೇವಾಲಯಕ್ಕೆ ಸ್ಥಳಾಂತರಿಸಿದ ಘಟನೆಯೂ ಸಹ ನಡೆದಿದೆ (ವಿಜಯ ಕರ್ನಾಟಕ, 11 ನವೆಂಬರ್ 2024).

ಈ ರೀತಿಯ ಪ್ರಕರಣಗಳು ನಡೆಯುತ್ತಿದ್ದರೂ ಸಹ ಅಸ್ಪೃಶ್ಯತೆ ನಿವಾರಣೆಯಾಗಿದೆ ಎಂದು ಮಾತನಾಡುವವರೂ ಇದ್ದಾರೆ. ಜಾತಿ ವಿಕಾಸದ ಬಗ್ಗೆ ಅಸ್ಪೃಶ್ಯತಾ ಪ್ರಶ್ನೆಗೆ ಉತ್ತರಿಸುವಾಗ ಗೋಪಾಲ್ ಗುರು 'ಗ್ರಾಮೀಣ ಭಾರತದಲ್ಲಿ ಅಸ್ಪೃಶ್ಯತೆ' ಎಂಬ ಪುಸ್ತಕದ ವಿಮರ್ಶೆಯಲ್ಲಿ ಜಾತಿ ಒಂದು ವದಂತಿ ಮತ್ತು ಭಾರತದಲ್ಲಿ ಅಸ್ಪೃಶ್ಯತೆಯು ಅಪ್ರಸ್ತುತವಾಗಿದೆ ಎಂದು ಪರೋಕ್ಷವಾಗಿ ಸೂಚಿಸುವ ವಿದ್ವಾಂಸರಿದ್ದಾರೆ. ಇಂದಿಗೂ ಸಹ ಹಳ್ಳಿಗಳಲ್ಲಿ ದೇವಾಲಯಗಳಿಗೆ ಬಿಟ್ಟುಕೊಳ್ಳುವುದಿಲ್ಲ. ಕ್ಷೌರದ ಅಂಗಡಿಗಳು ಇವರಿಗೆ ಶಾಶ್ವತವಾಗಿ ಮುಚ್ಚಿವೆ. ಎಷ್ಟೋ ಊರುಗಳಲ್ಲಿ ನಗರಗಳಿಗೆ ಹೋಗಿ ಕಟಿಂಗ್, ಶೇವಿಂಗ್ ಮಾಡಿಸಿಕೊಂಡು ಬರುವಂತಹ ಪರಿಸ್ಥಿತಿ ಇಂದಿಗೂ ಇದೆ. ಹೀಗೆ ಮೇಲ್ವರ್ಗದವರು ಈ ರೀತಿಯ ಶೋಷಣೆಯನ್ನು ಅನುಭವಿಸುತ್ತಿರುವ ಅಸ್ಪೃಶ್ಯರು ಮನುಷ್ಯರೇ ಅಲ್ಲವೇ ಎಂಬ ಪ್ರಶ್ನೆ ಮೂಡುತ್ತದೆ. ಅವರಿಗೂ ಬದುಕುವ ಹಕ್ಕಿಲ್ಲವೇ. ಸಂವಿಧಾನ ಎಲ್ಲರಿಗೂ ಸಮಾನವಾದ ಅವಕಾಶವನ್ನು ನೀಡಿದ್ದರೂ ಸಹ ಅವರನ್ನೇಕೆ ಪಶುಗಳಂತೆ ಕಾಣುತ್ತೀರಿ ಎಂಬುದನ್ನು ಅರಿತುಕೊಳ್ಳುವವರ ಸಂಖ್ಯೆ ವಿರಳ.

**ಅಸ್ಪೃಶ್ಯತೆ ನಿರ್ಮೂಲನೆಯಲ್ಲಿ ಸಾಂವಿಧಾನಿಕ ನಿಬಂಧನೆಗಳ ಪಾತ್ರ:**

ಭಾರತದ ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತೆಯನ್ನು ರದ್ದುಗೊಳಿಸಿದೆ ಮತ್ತು ಯಾವುದೇ ರೂಪದಲ್ಲಿ ಅದರ ಆಚರಣೆಯನ್ನು ನಿಷೇಧಿಸಲಾಗಿದೆ.

ಸಂವಿಧಾನದ 14, 15, 15(2), 17 ಮತ್ತು 29(2)ನೇ ವಿಧಿಗಳು ಅಸ್ಪೃಶ್ಯತೆಯ ನಿಷೇಧವನ್ನು ಕುರಿತು ವಿವರಿಸುತ್ತವೆ. ಸಾಮಾಜಿಕವಾಗಿ ಅಸ್ಪೃಶ್ಯತೆ ಮತ್ತು ತುಳಿತಕ್ಕೆ ಒಳಗಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಸರ್ಕಾರವು ಅನೇಕ ಸೌಲಭ್ಯಗಳನ್ನು ಕಲ್ಪಿಸಿದೆ. ಅಸ್ಪೃಶ್ಯತೆಯನ್ನು ಕಾನೂನುಬದ್ಧವಾಗಿ ರದ್ದುಗೊಳಿಸಲಾಯಿತು ಮತ್ತು 1955ರಲ್ಲಿ ಅಸ್ಪೃಶ್ಯತಾ ಅಪರಾಧ ಕಾಯ್ದೆಯನ್ನು ಜಾರಿಗೊಳಿಸಿತು. ಅಸ್ಪೃಶ್ಯತೆಯ ಆಚರಣೆಯನ್ನು ನಿರ್ಮೂಲನೆ ಮಾಡಲು ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೂ ಥೋರಟ್ ಮತ್ತು ಜೋಷಿ ಅವರು ಈ ಕಾಯ್ದೆಯಲ್ಲಿ ಗಮನಿಸಿ ಈ ರೀತಿಯಲ್ಲಿ ಹೇಳಿದ್ದಾರೆ. '1955ರ ಅಸ್ಪೃಶ್ಯತಾ ಅಪರಾಧ ಕಾಯ್ದೆಯು ಜಾರಿಗೆ ಬಂದ ನಂತರ ಅಸ್ಪೃಶ್ಯತೆಯ ಆಚರಣೆಯು ಸಾಂವಿಧಾನಿಕವಾಗಿ ನಿಷೇಧವಾಗಿದ್ದರೂ ಸಹ ಅದು ಖಾಸಗಿ, ಸಾಮಾಜಿಕ ಸಂವಹನಗಳಲ್ಲಿ ಮಾತ್ರವಲ್ಲದೇ ಸಾರ್ವಜನಿಕ ವಲಯಗಳಲ್ಲಿಯೂ ಕೆಲವು ರೂಪಗಳಲ್ಲಿ ಮುಂದುವರೆದಿದೆ' ಎಂದಿದ್ದಾರೆ.

ಈ ಕಾಯ್ದೆಯಲ್ಲಿ ಉಲ್ಲೇಖಿಸಿರುವಂತೆ ದೇವಾಲಯ, ಪೂಜಾಸ್ಥಳ ಅಥವಾ ಯಾವುದೇ ಇತರೆ ಸಾರ್ವಜನಿಕ ಸ್ಥಳಗಳಿಗೆ ವ್ಯಕ್ತಿಯನ್ನು ಪ್ರವೇಶಿಸದಂತೆ ತಡೆಯುವುದು, ಪವಿತ್ರ ಜಲಮೂಲಗಳು, ಬಾವಿಗಳು ಇತ್ಯಾದಿಗಳಿಂದ ನೀರು ತೆಗೆದುಕೊಳ್ಳದಂತೆ ತಡೆಯುವುದು, ಧರ್ಮಶಾಲೆ, ರೆಸ್ಟೋರೆಂಟ್, ಅಂಗಡಿ, ಹೋಟೆಲ್, ಆಸ್ಪತ್ರೆ, ಸಾರ್ವಜನಿಕ ವಾಹನ, ಶಿಕ್ಷಣ ಸಂಸ್ಥೆ ಮತ್ತು ಯಾವುದೇ ಸಾರ್ವಜನಿಕ ಮನರಂಜನಾ ಸ್ಥಳವನ್ನು ಬಳಸದಂತೆ ತಡೆಯುವುದು ಈ ಕಾಯ್ದೆಯಡಿ ಅಪರಾಧವಾಗಿದೆ.

ಈ ಕಾಯ್ದೆಯು ಅಸ್ಪೃಶ್ಯತೆಯ ಆಚರಣೆಯ ಆರೋಪವನ್ನು ಹೊತ್ತ ಯಾವುದೇ ವ್ಯಕ್ತಿಗೆ ಮೊದಲ ಬಾರಿಗೆ ಆರು ತಿಂಗಳ ಜೈಲು ಶಿಕ್ಷೆ ಅಥವಾ ರೂ. 500/–ದಂಡ ವಿಧಿಸುವ ಅವಕಾಶವನ್ನು ಕಲ್ಪಿಸಿದೆ. ಎರಡನೇ ಬಾರಿಗೆ ಅಪರಾಧವೆಸಗಿದವರಿಗೆ ಕನಿಷ್ಟ ಆರು ತಿಂಗಳಿನಿಂದ ಗರಿಷ್ಟ ಒಂದು ವರ್ಷದ ಅವಧಿಗೆ ಜೈಲು ಶಿಕ್ಷೆಯನ್ನು ವಿಧಿಸಲಾಗುತ್ತದೆ ಜೊತೆಗೆ ಕನಿಷ್ಟ ರೂ. 2000/–ಅಥವಾ ರೂ. 2000/–ಕ್ಕಿಂತ ಹೆಚ್ಚು ದಂಡ ವಿಧಿಸಲಾಗುತ್ತದೆ ಮೂರನೇ ಬಾರಿಯೂ ಅಪರಾಧವೆಸಗಿದವರಿಗೆ ಒಂದು ವರ್ಷದಿಂದ ಎರಡು ವರ್ಷಗಳ ಅವಧಿಯವರೆಗೆ ಜೈಲು ಶಿಕ್ಷೆಯನ್ನು ವಿಧಿಸಲಾಗುತ್ತದೆ. ಈ ಕಾಯ್ದೆಯನ್ನು 2ನೇ ಅಕ್ಟೋಬರ್ 1976ರಂದು ತಿದ್ದುಪಡಿ ಮಾಡಿ 'ನಾಗರಿಕ ಹಕ್ಕುಗಳ ರಕ್ಷಣಾ ಕಾಯ್ದೆ' ಎಂದು ಮರುನಾಮಕರಣ ಮಾಡಲಾಯಿತು. ಈ ಕಾಯ್ದೆಯು ಅಸ್ಪೃಶ್ಯತೆಯನ್ನು ನಿಗ್ರಹಿಸಲು ಕಠಿಣ ಕ್ರಮಗಳನ್ನು ಸಹ ಹೊಂದಿತ್ತು. ತನಿಖಾಧಿಕಾರಿಗಳು ಅಸ್ಪೃಶ್ಯತೆಗೆ ಸಂಬಂಧಿಸಿದ ದೂರುಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವುದನ್ನು ಪ್ರಚೋದನೆಗೆ ಸಮಾನವೆಂದು ಪರಿಗಣಿಸಿತು. ಕಾಯ್ದೆಯ ಸೆಕ್ಷನ್ 3 ರಿಂದ 7ಎ ವರೆಗೆ ಅಸ್ಪೃಶ್ಯತೆ

ಮತ್ತು ಅದರ ಶಿಕ್ಷೆಗಳನ್ನು ಚರ್ಚಿಸುತ್ತದೆ. ಅಸ್ಪೃಶ್ಯತೆಯ ಎಲ್ಲಾ ರೂಪಗಳನ್ನು ನಿರ್ಮೂಲನೆಗೊಳಿಸುವುದು ಈ ಕಾಯ್ದೆಯ ಪ್ರಮುಖ ಉದ್ದೇಶವಾಗಿದೆ.

ನಂತರದ ದಶಕದಲ್ಲಿ ಭಾರತ ಸರ್ಕಾರವು ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯಲು ಮತ್ತು ಆ ದೌರ್ಜನ್ಯಗಳಿಂದ ದಲಿತರನ್ನು ರಕ್ಷಿಸಬೇಕೆಂಬ ಉದ್ದೇಶದಿಂದ ಸರ್ಕಾರವು 1989ರಲ್ಲಿ 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ)' ಕಾಯ್ದೆಯನ್ನು ಜಾರಿಗೊಳಿಸಿತು. ಈ ಕಾಯ್ದೆಯು ಅಸ್ಪೃಶ್ಯತೆ ಮತ್ತು ದಲಿತರ ಮೇಲಿನ ದೌರ್ಜನ್ಯಗಳನ್ನು ನಿಷೇಧಿಸಲು ಇರುವ ಕಾನೂನಿನ ಪ್ರಮುಖ ಅಂಶವಾಗಿದೆ.

ಇದನ್ನು ಭಾರತದ ಸಂಸತ್ತು 11ನೇ ಸೆಪ್ಟೆಂಬರ್ 1989ರಲ್ಲಿ ಜಾರಿಗೆ ತಂದಿತು. 1989ರ ಕಾಯ್ದೆಯು 2013, 2014, 2015, 2018 ಮತ್ತು 2019ರಲ್ಲಿ ಗಣನೀಯ ತಿದ್ದುಪಡಿಗಳಿಗೆ ಒಳಗಾಯಿತು. ಈ ಕಾಯ್ದೆಯನ್ನು ಅಂಗೀಕರಿಸುವಾಗ ಭಾರತೀಯ ದಂಡಸಂಹಿತೆ 1860 (ಐ. ಪಿ. ಸಿ. ) ಸೇರಿದಂತೆ ಅಸ್ತಿತ್ವದಲ್ಲಿರುವ ಕಾನೂನುಗಳು ಪರಿಶಿಷ್ಟವಲ್ಲದ ಸಮುದಾಯಗಳಿಂದ ಪರಿಶಿಷ್ಟ ಸಮುದಾಯಗಳ ಮೇಲೆ ನಡೆಸಲ್ಪಡುವ ಜಾತಿಯಾಧಾರಿತ ಅವಮಾನಗಳು ಮತ್ತು ದ್ವೇಷ ಅಪರಾಧಗಳನ್ನು (ಕಾಯ್ದೆಯ ಸೆಕ್ಷನ್ 3)ರಲ್ಲಿ ದೌರ್ಜನ್ಯಗಳು ಎಂದು ವ್ಯಾಖ್ಯಾನಿಸಲಾಗಿದೆ. ಈ ಕಾಯ್ದೆಯನ್ವಯ ದೌರ್ಜನ್ಯವೆಸಗುವ ಯಾವುದೇ ವ್ಯಕ್ತಿಯನ್ನು ಪ್ರಾಥಮಿಕ ತನಿಖೆಯಿಲ್ಲದೇ ಬಂಧಿಸಬಹುದಾಗಿತ್ತು ಆದರೆ ಸುಭಾಷ್ ಕಾಶೀನಾಥ ಮಹಾಜನ್ ವರ್ಸಸ್ ಸ್ಟೇಟ್ ಆಫ್ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ಪ್ರಕರಣದಲ್ಲಿ ಭಾರತದ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳಾದ ಯು. ಯು. ಲಲಿತ್ ಮತ್ತು ಎ. ಕೆ. ಗೋಯೆಲ್ ಅವರ ಇಬ್ಬರು ನ್ಯಾಯಾಧೀಶರ ಪೀಠವು 20ನೇ ಮಾರ್ಚ್ 2018ರಂದು ನೀಡಿದ ತೀರ್ಪಿನಿಂದ ತಿದ್ದುಪಡಿ ಕಾಯ್ದೆ 2018ರಲ್ಲಿ ಜಾರಿಗೆ ಬಂದಿತು. ಈ ತೀರ್ಪಿನಿಂದ ಪರಿಶಿಷ್ಟ ಸಮುದಾಯದ ಸದಸ್ಯರನ್ನು ಅವಮಾನಿಸಿದ ಅಥವಾ ಗಾಯಗೊಳಿಸಿದ ಆರೋಪ ಒತ್ತಿರುವ ವ್ಯಕ್ತಿಯನ್ನು ತಕ್ಷಣ ಬಂಧಿಸುವುದನ್ನು ನಿಷೇಧಿಸಲಾಯಿತು. ಈ ತೀರ್ಪಿನಿಂದ ಕಾಯ್ದೆಯನ್ನು ಗಣನೀಯವಾಗಿ ದುರ್ಬಲಗೊಳಿಸಲಾಗಿದೆ ಎಂದು ಟೀಕಿಸಲಾಯಿತು. ಇದರ ಪರಿಣಾಮವಾಗಿ 2018ರಲ್ಲಿ ಸಂಸತ್ತು ತಿದ್ದುಪಡಿ ಕಾಯ್ದೆ 2018ನ್ನು (20ನೇ ಆಗಸ್ಟ್ 2018ರಿಂದ ಜಾರಿಗೆ ಬರುವಂತೆ) ಅಂಗೀಕರಿಸಿತು.

ಇದು ಎಫ್. ಐ. ಆರ್. ದಾಖಲಿಸಲು ಪ್ರಾಥಮಿಕ ವಿಚಾರಣೆಯ ಅಗತ್ಯವನ್ನು ತೆಗೆದುಹಾಕುತ್ತದೆ ಮತ್ತು ಅಧಿಕಾರಿಗಳನ್ನು ಬಂಧಿಸುವ ಮೊದಲು ಅನುಮತಿಯ ಅಗತ್ಯವನ್ನು ತೆಗೆದುಹಾಕುತ್ತದೆ. ಸೆಕ್ಷನ್ 18ಎ(1)(ಎ) ಯಾವುದೇ ವ್ಯಕ್ತಿಯ ವಿರುದ್ಧ

ಎಫ್. ಐ. ಆರ್. ದಾಖಲಿಸಲು ಪ್ರಾಥಮಿಕ ವಿಚಾರಣೆಯ ಅಗತ್ಯವಿಲ್ಲ 18ಎ(1)(ಬಿ) ಅನ್ನು ಸೇರಿಸುವ ಮೂಲಕ ಈ ಕಾಯ್ದೆಯಡಿ ಅಪರಾಧ ಎಸಗಿದ ಆರೋಪ ಹೊರಿಸಲಾದ ಯಾವುದೇ ವ್ಯಕ್ತಿಯ ಬಂಧನಕ್ಕೆ ತನಿಖಾಧಿಕಾರಿಗೆ ಅನುಮೋದನೆ ಅಗತ್ಯವಿಲ್ಲ ಮತ್ತು ಈ ಕಾಯ್ದೆ ಅಥವಾ ಸಂಹಿತೆಯ ಅಡಿಯಲ್ಲಿ ಒದಗಿಸಲಾದ ಕಾರ್ಯವಿಧಾನವನ್ನು ಹೊರತುಪಡಿಸಿ ಯಾವುದೇ ಕಾರ್ಯ ವಿಧಾನವು ಅನ್ವಯಿಸುವುದಿಲ್ಲ.

ಈ ರೀತಿಯ ಸಾಂವಿಧಾನಿಕ ನಿಬಂಧನೆಗಳು ಇದ್ದರೂ ಸಹ ಅಸ್ಪೃಶ್ಯತೆ ಹೆಮ್ಮರವಾಗಿ ಬೆಳೆದಿದೆಯೇ ಹೊರತು ಅದನ್ನು ನಿರ್ಮೂಲನೆ ಮಾಡುವಲ್ಲಿ ಇವುಗಳ ಪಾತ್ರ ಇನ್ನೂ ಹೆಚ್ಚು ಪರಿಣಾಮಕಾರಿಯಾಗುವಲ್ಲಿ ವಿಫಲವಾಗಿವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಮುಂದುವರೆದು ಇದರ ನಿವಾರಣೆಗೆ ಹೆಚ್ಚಿನ ಕಾಯ್ದೆಗಳ ಜಾರಿಗೆ ಅವಶ್ಯವಿದೆ ಎಂಬುದನ್ನು ಮನಗಾಣಬೇಕು. ಏಕೆಂದರೆ ಎ. ಷಣ್ಮುಖರವರ 1989ರ "ದಲಿತರ ದೌರ್ಜನ್ಯ ತಡೆ ಕಾಯ್ದೆಯು ಅಸ್ಪೃಶ್ಯತೆಯನ್ನು ತೊಲಗಿಸುವಲ್ಲಿ ವಿಫಲವಾಗಿರುವುದು ಹಾಗೂ ಅದರ ದುರ್ಬಳಕೆಯಾಗುತ್ತಿರುವುದಕ್ಕೆ ಈ ಕಾಯ್ದೆಯು ರೂಪುಗೊಂಡಿರುವ ಜಾತಿ ವ್ಯವಸ್ಥೆಯ ಪೂರ್ವಕಲ್ಪನೆ ಅಥವಾ ಸೈದ್ಧಾಂತಿಕ ಚೌಕಟ್ಟೇ ಪ್ರಮುಖ ಕಾರಣ" (ಷಣ್ಮುಖ, ಎ. , 1989, ದಲಿತರ ಮೇಲಿನ ದೌರ್ಜನ್ಯ ಮತ್ತು ಪರಿಹಾರ ಕಾಯ್ದೆ, ಪುಟ 19–34) ಎಂಬುದನ್ನು ಲೇಖನದಲ್ಲಿ ಚರ್ಚಿಸುತ್ತಾರೆ.

ಅಸ್ಪೃಶ್ಯತೆಯನ್ನು ತೊಲಗಿಸುವ ನಿಟ್ಟಿನಲ್ಲಿ ಬಂದಿರುವ ಸಾಂವಿಧಾನಿಕ ನಿಬಂಧನೆಗಳು ಅಸ್ಪೃಶ್ಯತೆಯನ್ನು ಕಡಿಮೆ ಮಾಡುವಲ್ಲಿ ಇನ್ನೂ ಹೆಚ್ಚಿನ ಕಠಿಣ ನಿಯಮಗಳ ಅವಶ್ಯಕತೆಯಿದೆ. ಪ್ರತಿನಿತ್ಯ ದೇಶ ಅಥವಾ ರಾಜ್ಯದ ಯಾವುದೋ ಒಂದು ಮೂಲೆಯಲ್ಲಿ ಅಸ್ಪೃಶ್ಯತೆಯ ಪ್ರಕರಣಗಳು, ದಲಿತರ ಮೇಲಿನ ದೌರ್ಜನ್ಯಗಳು ಮುಂತಾದ ಪ್ರಕರಣಗಳು ನಡೆಯುತ್ತಲೇ ಇರುತ್ತವೆ. ಈ ಹೀನ ಕೃತ್ಯ ಎಂದೂ ನಿಲ್ಲದ ಆಚರಣೆಯಾಗಿದ್ದು ಮುಂದುವರೆಯುತ್ತಲೇ ಇದೆ. ಇದಕ್ಕೆ ಕೊನೆಯೆಂಬುದೇ ಇಲ್ಲ.

ಅಸ್ಪೃಶ್ಯತೆಗೆ ಒಳಗಾಗುವವರಿಗೂ ನಿಮ್ಮಂತೆಯೇ ಬದುಕುವ ಹಕ್ಕಿದೆ, ಸಮಾನತೆಯ ಹಕ್ಕಿದೆ ಹಾಗೂ ಅವಕಾಶಗಳಿವೆ ಎಂಬುದನ್ನು ಅರಿಯುವುದು ಪ್ರಸ್ತುತ ದಿನಮಾನಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ.

## ಪರಾಮರ್ಶನ ಗ್ರಂಥಗಳು:


1. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
2. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–3, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
3. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–6, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
4. ಮಂಗ್ಳೂರು ವಿಜಯ್, (2014), ಅಸ್ಪೃಶ್ಯತೆ, ಸಂಬುದ್ಧ ಪ್ರಕಾಶನ, ಬೆಂಗಳೂರು.
5. ಶಿವರಾಂ ಎನ್. ಆರ್. , (2017), ಭಾರತ ಭಾಗ್ಯವಿಧಾತ ಡಾ. ಬಾಬಾಸಾಹೇಬ್ ಅಂಬೇಡ್ಕರ್, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.
6. ಷಣ್ಮುಖ ಎ. , (1989), ದಲಿತರ ಮೇಲಿನ ದೌರ್ಜನ್ಯ ಮತ್ತು ಪರಿಹಾರ ಕಾಯ್ದೆ, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7. ಉದಯವಾಣಿ ದಿನಪತ್ರಿಕೆ, 26 ಸೆಪ್ಟೆಂಬರ್ 2021.
8. ಕನ್ನಡ ಪ್ರಭ ದಿನಪತ್ರಿಕೆ, 24 ನವೆಂಬರ್ 2023.
9. ಪ್ರಜಾವಾಣಿ ದಿನಪತ್ರಿಕೆ, 15 ನವೆಂಬರ್ 2024.
10. ವಿಜಯ ಕರ್ನಾಟಕ ದಿನಪತ್ರಿಕೆ, 11 ನವೆಂಬರ್ 2024.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.